ಶ್ರೀ ಎಸ್. ಬಂಗಾರಪ್ಪ :– ತಮ್ಮ ಪ್ರಶ್ನೆಯಲ್ಲಿ ಎಷ್ಟು ಏರಿಯಾ ಕವರ್ ಮಾಡುತ್ತೀರಿ ಎಂದು ಇಲ್ಲ. ತಾವು ಪ್ರತ್ಯೇಕ ಪ್ರಶ್ನೆ ಕೇಳಿದರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಜಿ. ರಾಜೂಗೌಡ :– ಈಗ ತಾವು 324 ಕಾಮಗಾರಿಗಳಿಗೆ ಆಡಳಿತ ಮಂಜೂರಾತಿಯನ್ನು ಕೊಟ್ಟಿದ್ದೀರಿ ಅಂದಮೇಲೆ ಅದರ ಗುರಿ ಇಲ್ಲವೇ ?

ಅಧ್ಯಕ್ಷರು :– ಮಾನ್ಯ ಸದಸ್ಯರು ತಮ್ಮ ಮೂಲ ಪ್ರಶ್ನೆಯಲ್ಲಿಯೇ ಪ್ರಪೋಸ್ಡ್ ವರ್ಕ್ಸ್‌ನಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ ಎಂದು ಕೇಳಿದ್ದರೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಿದ್ದರು.

ಶ್ರೀ ಎಸ್. ಬಂಗಾರಪ್ಪ :– ಆದರೂ ಕೂಡ ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟು ಬಿಡುತ್ತೇನೆ. There are about 465 completed Lift Irrigation Schemes under Krishna and Kaveri Basins in the state of Karnataka to benefit about 1,21,041 hectares. In addition to this there are 62 ongoing Lift Irrigation Schemes under Krishna basin and Kaveri basin. The amount required for completion of these schemes is about Rs. 3,649 lakhs. These 62 schemes, on completion, are proposed to benefit 38,378 hectares. Further, 324 fresh Lift Irrigation schemes–256 in Krishna basin and 68 in Kaveri basin are proposed to be taken up at an estimated cost of Rs. 14,241 Lakhs. ಈಗ ಏರಿಯಾ ಮತ್ತು ಪ್ರಾಜೆಕ್ಟ್‌ಗಳ ಕಾಸ್ಟ್ ಎಲ್ಲಾ ಮಾನ್ಯ ಸದಸ್ಯರಿಗೆ ಒದಗಿಸಿಕೊಟ್ಟಿದ್ದೇನೆ.

ಶ್ರೀ ಜಿ. ರಾಜೂಗೌಡ :– 1 ವರ್ಷದಲ್ಲಿ ಮುಗಿಯತಕ್ಕ ವರ್ಕ್ಸ್ ಎಷ್ಟಿದೆ ?

Sri S. Bangarappa : They are all on going works. You know the details of Upper Krishna Project and Kaveri.

ಅಧ್ಯಕ್ಷರು :– ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಟಿ. ಎನ್. ನರಸಿಂಹಮೂರ್ತಿ :– ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಇಂದು ಲಿಖಿತ ಮೂಲಕ ಉತ್ತರಿಸಬೇಕಾದ 12 ನೇ ಪಟ್ಟಿಯಲ್ಲಿರತಕ್ಕ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ :– ಬಾಗಲಕೋಟಿ ತಾಲ್ಲೂಕಿನಲ್ಲಿ ಏತ ನೀರಾವರಿ ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 447 (1190)

ಶ್ರೀ ಅಜಯ್ ಸರ್‌ನಾಯಕ (ಬಾಗಲಕೋಟೆ) :– ಮಾನ್ಯ ಸಣ್ಣನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಾಗಲಕೋಟಿ ತಾಲ್ಲೂಕಿನಲ್ಲಿಯ ಘಟಪ್ರಭಾ ಹಾಗೂ ಕೃಷ್ಣಾ ನದಿಗಳ ದಂಡೆಗುಂಟ ಎಷ್ಟು ಏತ ನೀರಾವರಿ ಪ್ರಾರಂಭಿಸಲು ಸರ್ಕಾರ ಯೋಜನೆ ಹಾಕಿದೆ.

ಆ) ಏತ ನೀರಾವರಿ ಯೋಜನೆ ಸಿದ್ಧಪಡಿಸಿದ್ದಲ್ಲಿ ಈ ವರ್ಷ ಕಾರ್ಯರೂಪಕ್ಕೆ ತರುವ ಯೋಜನೆಗಳೆಷ್ಟು ?

ಶ್ರೀ ಮಲ್ಲಿಕಾರ್ಜುನ ಪ್ರಸನ್ನ ಕೆ. ಎಸ್. (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) ಬಾಗಲಕೋಟಿ ತಾಲ್ಲೂಕಿನಲ್ಲಿ ಘಟಪ್ರಭಾ ನದಿಯಿಂದ ಎರಡು ಏತ ನೀರಾವರಿ ಯೋಜನೆಗಳನ್ನು ಮತ್ತು ಕೃಷ್ಣಾ ನದಿಯಿಂದ ಒಂದು ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಆ) ಯಾವುವೂ ಇಲ್ಲ.